Sri RAMAKRISHNA HEGDE.—My answer also was equally simple, if not more so. ನಾನು ಹೇಳಿದ್ದೇನೆ, ಮೊದಲು ಬಂದಷ್ಟು ಹಣವನ್ನು ಕೂಡಲೆ ಹಂಚಲಾಗಿದೆ, ತೊಂದರೆಯಾಗಿಲ್ಲ. ಬಡ್ಜೆಟ್‌ನಲ್ಲಿ ಒದಗಿಸಿದ್ದು ಕೇಂದ್ರ ಸರ್ಕಾರದಿಂದ 30 ಲಕ್ಷ ರೂಪಾಯಿ ಸಿಕ್ಕುತ್ತದೆಂಬ ನಿರೀಕ್ಷೆಯಮೇಲೆ. ಕೇಕಡ 50 ರಷ್ಟು ಕೇಂದ್ರ ಸರ್ಕಾರ, 25 ರಷ್ಟು ನಾವು ಕೊಡುತ್ತೇವೆ. ಇನ್ನೂ 25ರಷ್ಟು ಜನರು ಕೆಲಸದರೂಪದಲ್ಲಿ ಹಾಕಬೇಕು. ಇದರಲ್ಲಿ ಯಾವ ಗೊಂದಲವೂ ಇಲ್ಲ.

ಶ್ರೀ ಜಿ. ಶಿವಪ್ಪ.—ಆಡಳಿತ ಯಂತ್ರ ಜಾಗ್ರತೆ ಚಲಸದೆ ಅನೇಕ ತೊಂದರೆಗಳು ಬಂದು, ತಕ್ಷಣ ಸ್ಥಳೀಯ ಅಧಿಕಾರಿಗಳಿಗೆ ತಿಳಿವಳಿಕೆ ಕೊಡದೇ ಯಿರುವುದರಿಂದ ಹೀಗೆ ತಡವಾಗುತ್ತದಲ್ಲವೆ ?

Sri RAMAKRISHNA HEGDE.—I beg to disagree with my friend. On the contrary the work was very brisk and efficient.

Sri S. D. KOTHAVALE.—May I know whether it is possible to get the time extended to spend the amount ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇದರಲ್ಲಿ ಸಿಕ್ಕುವುದಿಲ್ಲ.

Sri C. K. RAJAIAH SETTY.—The Minister was pleased to say that there was no hope of amounts being lapsed. Is it not a fact that N.E.S. Officers and many others have stated that it is not possible to get the fifty per cent collected from the labour ?

Sri RAMAKRISHNA HEGDE.—My Hon'ble friend is confusing the issues. This has no connection with the N.E.S. schemes.

ಶ್ರೀ ಜಿ. ದುಗ್ಗಪ್ಪ.—8ನೆಯ ಜೂನ್ 1957ರಲ್ಲಿ ಸರ್ಕಾರದಿಂದ ಒಂದು ಸರ್ಕ್ಯುಲರ್ ಕಳುಹಿಸಿ ಹೊಸ ಕೆಲಸಗಳನ್ನು ತೆಗೆದುಕೊಳ್ಳಬಾರದೆಂದು ಸೂಚನೆ ಕೊಟ್ಟಿದ್ದೀರಿ. ಹೀಗೆ ಮಾಡಿ ಬಡ್ಜೆಟ್‌ನಲ್ಲಿ ಒದಗಿಸಿದ ಹಣವನ್ನು ವರ್ಷದ ಕೊನೆಯಲ್ಲಿ ಕೊಟ್ಟರೆ ಯಾವ ರೀತಿ ಖರ್ಚು ಮಾಡುವುದಕ್ಕೆ ಸಾಧ್ಯ ? ಹಣ ಲ್ಯಾಪ್ಸ್ ಆಗುವುದಿಲ್ಲವೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ಸರ್‌ಕ್ಯುಲರ್ 1ನೆಯ ಏಪ್ರಿಲ್ 1957ರ ಒಳಗಿನ ಕಾರ್ಯಕ್ರಮಗಳಿಗೆ ಸಂಬಂಧಪಟ್ಟದ್ದು. ಬೇರೆ ಬೇರೆ ಜಿಲ್ಲೆಗಳಲ್ಲಿ ಅನಂತರದ ಕೆಲಸಗಳ ಪಟ್ಟಿಯನ್ನು ತಯಾರು ಮಾಡಿದ್ದಾರೆ. ನಾವು ಮಂಜೂರುಮಾಡಿದ ಹಣವನ್ನು ಖರ್ಚುಮಾಡುತ್ತಿದ್ದಾರೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಬಡ್ಜೆಟ್ ಅಲಾಟ್‌ಮೆಂಟನ್ನು ಯಾವ ತಿಂಗಳಲ್ಲಿ ಡಿಸ್ಟ್ರಿಕ್ಟ್‌ಗಳಿಗೆ ಕಳುಹಿಸಿಕೊಟ್ಟಿರಿ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಜೂನ್ 8ನೆಯ ತಾರೀಕು.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಜೂನ್ 8ನೆಯ ತಾರೀಕಾದ ಮೇಲೆ ಡಿಸ್ಟ್ರಿಕ್ಟ್‌ಗಳಲ್ಲಿ ಬಡ್ಜೆಟ್ ಅಲಾಟ್‌ಮೆಂಟ್ ಇನ್ನೂ ಬರಲಿಲ್ಲವೆಂದು ಹೇಳುತ್ತಿದ್ದುದು ನಿಜವೇ ?

ಅಧ್ಯಕ್ಷರು.—ಯಾರು ಹೇಳುತ್ತಿದ್ದುದು ?

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಅಧಿಕಾರಿಗಳು ಮತ್ತು ಡೆಪ್ಯುಟಿ ಕಮೀಷನರು.

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾರು ಹೇಳಿದರೋ ಗೊತ್ತಿಲ್ಲ.

ಶ್ರೀ ಜಿ. ದುಗ್ಗಪ್ಪ.—1958ನೆಯ ಇಸವಿ ಜನವರಿ ತಿಂಗಳವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಯಾವ ಹೊಸ ಕೆಲಸವನ್ನೂ ತೆಗೆದುಕೊಳ್ಳಬಾರದೆಂದು ಸರ್ಕಾರ ಸರ್ಕ್ಯುಲರ್ ಕಳುಹಿಸಿದುದು ನಿಜವೆ ?

Sri RAMAKRISHNA HEGDE.—The main question is not a specific question. The question is of a general nature.

Mr. SPEAKER.—It is a general question.

ಶ್ರೀ ಜಿ. ವೆಂಕಟೇಗೌಡ.—ರೋಕರ್ ಡೆವಲಪ್‌ಮೆಂಟ್ ಕೆಲಸಗಳನ್ನು ಪ್ಲಾನ್‌ನಲ್ಲಿ ಸೇರಿಸಬಾರದೆಂದು ಪ್ಲಾನಿಂಗ್ ಕಮಿಷನ್‌ನವರ ಅಭಿಪ್ರಾಯ ವಿದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಕೆಲಸಗಳನ್ನು ಪ್ಲಾನ್‌ನಲ್ಲಿ ಸೇರಿಸತಕ್ಕದ್ದಲ್ಲ, ಬೇರೆ ಹಣವನ್ನು ಬಡ್ಜೆಟ್‌ನಲ್ಲಿ ಒದಗಿಸುತ್ತೇವೆ. ಕೇಂದ್ರ ಸರ್ಕಾರದವರೂ ಹಣ ಸಹಾಯ ಮಾಡುತ್ತಾರೆ.

Using of Water in the deep pits for Irrigation in Koppal Hills.

Q.—1765. Smt. LEELAVATHI VENKATESH MAGADI (Shirahatti).—

Will the Government be pleased to state :—

(*a*) whether they are aware of the existence of many gold mine deep pits or wells on the Koppal hills in Dharwar District ;

(*b*) whether they are aware that many of these pits are full of water ;

(*c*) whether they had conducted survey regarding the possibilities of using this water for irrigation purposes;

(*d*) if not, the steps they propose to take ?

A.—Sri H. K. VEERANNA GOWDH (Minister for Public Works).—

(*a*) Yes.

(*b*) Some pits are covered with a large quantity of excavated rock debris and some do contain water at a depth of about 50' from ground level.

(*c*) No detailed surveys have been conducted.

(*d*) Preliminary investigations have shown that the proposal is not feasible and that it may involve unduly heavy expenditure.

ಶ್ರೀಮತಿ ಲೀಲಾವತಿ ವೆಂಕಟೇಶ್ ಮಾಗಡಿ — ಮುದ್ರಣ ಮಾಡಿರುವುದರಲ್ಲಿ Koppal hills ಎಂದಿದೆ, ಅದು ಕಪ್ಪದ ಹಿಲ್ಸ್ ಎಂದಿರಬೇಕು. ತನಿಖೆ ಆಯ ತೆಂದು ಹೇಳಿದೆ, ಇದು ಯಾವಾಗ, ಯಾವ ತಾರೀಖು ತನಿಖೆ ಆಯಿತು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾವಾಗ, ಯಾವ ತಾರೀಕು ಆಯಿತು ಎಂಬ ವಿವರಗಳು ನನ್ನಲ್ಲಿಲ್ಲ.

Sri F. H. MOHSIN.—Who carried on the investigation ?

Sri H. K. VEERANNA GOWDH.—That information also is not available.

Sri F. H. MOHSIN.—For how many months was the investigation carried on ?

Sri H. K. VEERANNA GOWDH.—The available information is—formerly investigation was carried on and it was found to be not practicable.

Dr. R. NAGAN GOWDA.—May I know what kind of investigation has been carried out and has it been found that water is available and if so what acreage could be irrigated and for what period ?

Sri H. K. VEERANNA GOWDH.—Those pits are not vertical. They are slanting. They are about 50 feet, in depth. Opinion is that water cannot be lifted from such wells with such depth easily. Further, if they are to be repaired and made useful for lifting water, the suggestion contained here is that fresh wells if dug would be cheaper. It is said water could be had at a depth of 25 or 30 ft All these things have been considered and they have come to the conclusion that it is not practicable to make use of the water in the mining pits.

Sri Y. VEERAPPA.—Is gold available in these mines ?

Mr. SPEAKER.—The question is not about gold. It is a question of using water in these pits.

ಶ್ರೀ ಟಿ. ಕೆ. ಕಂಬಳಿ.—ಉತ್ತರ (*d*)ದಲ್ಲಿ ಈ ಯೋಜನೆಯಿಂದ ಕಾರಣವಿಲ್ಲವೆ ಅತಿಶಯವಾದ ವೆಚ್ಚ ನಂಭವಿಸುವುದೆಂದು ಕಂಡುಬಂದಿದೆ ಎಂಬುದಾಗಿ ಹೇಳಲಾಗಿದೆ. ಹಾಗಾದರೆ ಅತಿಶಯವಾದ ವೆಚ್ಚ ಎಂದರೆ ಎಷ್ಟು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅಲ್ಲಿಯ ತಗ್ಗು ಗಳೆಲ್ಲಾ ಸ್ಲಾಂಟಿಂಗ್ ಆಗಿರುವದರಿಂದ ಅವುಗಳ ನ್ನೆಲ್ಲಾ ನೆಟ್ಟಗೆ ಮಾಡಿ ಪಂಪು ಹಾಕಿ ನೀರು ತೆಗೆದು ಕೊಳ್ಳುವ ಯೋಜನೆಗೆ ಐವತ್ತು ಸಾವಿರ ರೂಪಾಯಿಗಳಿ ಗಿಂತ ಹೆಚ್ಚು ಖರ್ಚು ಆಗುತ್ತದೆಂದು ಅಂದಾಜು ಮಾಡ ಲಾಗಿದೆ. ಅಷ್ಟೇ ಅಥವಾ ಅದಕ್ಕಿಂತ ಕಡಿಮೆ ಹಣದ ಖರ್ಚಿನಲ್ಲಿ ಬೇರೆ ಬಾವಿಗಳನ್ನು ತೆಗೆಯಿಸಿದರೆ 25 ಅಡಿ ಆಳದಲ್ಲಿ ನೀರು ಸಿಕ್ಕುತ್ತದೆ ಎಂದು ತಿಳಿದುಬಂದಿದೆ. ಆದುದರಿಂದ ಈ ಬಾವಿಗಳ ಯೋಜನೆಯನ್ನು ಕಾರ್ಯ ಗತಮಾಡಲು ಆಗುವುದಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಬಿ. ಕೆ. ನಾಗೂರ್.—ಪ್ರಾಥಮಿಕ ಸಂಶೋಧನೆ ಗಳನ್ನು ಯಾವ ತಾರೀಖಿನ ದಿವಸ ಮಾಡಲಾಯಿತು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಒಂದು ನಿರ್ದಿಷ್ಟ ವಾದ ಪ್ರಶ್ನೆಯನ್ನು ಬರೆದು ಕಳಿಸಿದರೆ ಅದಕ್ಕೆ ಉತ್ತರ ಕೊಡಲಾಗುವುದು.

Sri F. H. MOHSIN.—May I know whether the investigation has been carried out by the departmental officials or whether foreign experts were invited ?

Sri H. K. VEERANNA GOWDH.—My impression is that the departmental officers have done it. No foreign experts were invited.

Sri Y. VEERAPPA.—Is there cultivable land around these mining pits ?

Sri H. K. VEERANNA GOWDH. — I do not know.

Sri F. H. MOHSIN.—Whether investigations were carried on after the integration or before the integration ?

Sri H. K. VEERANNA GOWDH.—It is perhaps before integration.

Transfer of Clerks working in the Civil Courts of Dharwar.

Q.—1825. **Sri G. B. SHANKARA RAO** (Hirekerur).—

Will the Government be pleased to state :—

(*a*) the number of clerks that have put in a total service of more than five years in each of the Civil Courts of Dharwar since 1937 ;

(*b*) whether they intend to transfer them to the mofussil courts ?

A.—**Sri C. M. POONACHA** (Minister for Home Affairs and Industries).—

(*a*) 22.

(*b*) Yes.

Sri VEERENDRA PATIL (Deputy Minister for Home Affails and Industries).—I would like to correct the answer, Sir. In respect of question (*a*), the number 22 is not for each court. But it is for all the courts.